ಕುನ್ನುಮ್ಮತೀಯನ್ ಮುತ್ತಪ್ಪನ ಸಹಾಯಕನಾದ. ಮುತ್ತಪ್ಪನಿಗೆ ಮಠವುಂಟಾಯಿತು. ತೀಯನ್ ನಿರ್ಮಿಸಿದುದರಿಂದ ಅದು ಮಠಪ್ಪುರಯಾಯಿತು. ಮಠಪ್ಪುರಾದ ಕಾರ್ಯದರ್ಶಿಯನ್ನು ಮಠಯನ್ ಅಥವಾ ಮಡಯನ್ ಎಂದು ಕರೆಯತೊಡಗಿದರು.

ಪುರಳಿಮಲೆಯ ತಪ್ಪಲಿನ ಊರಿನವರು ಮುತ್ತಪ್ಪನನ್ನು ಹುಡುಕುತ್ತಾ ಪರಶ್ಶಿನಿಕಡವ್‌ಗೆ ಬಂದರು. ಅಷ್ಟರಲ್ಲಾಗಲೇ ಮುತ್ತಪ್ಪನ್ ತೆಯ್ಯಂ ಆಗಿ ರೂಪಾಂತರಗೊಂಡಿದ್ದ. ಉಪವಾಸ, ದಾರಿದ್ರ್ಯದಿಂದ ಬಳಲುತ್ತಿರುವ ಊರಿನವರು ತಮ್ಮ ಅಳಲನ್ನು ಮುತ್ತಪ್ಪನ ಮುಂದೆ ಹೇಳಿಕೊಂಡರು. ತಾಳಕ್ಕೆ ತಕ್ಕಂತೆ ಹೆಜ್ಜೆ ಹಾಕಿ ಚೆಂಡೆಯೊಂದಿಗೆ ಕುಣಿದಾಡಿ ಮುತ್ತಪ್ಪನ್ ಅವರಿಗೆ ಅನುಗ್ರಹ ನೀಡಿದ. ಮುತ್ತಪ್ಪನ್ ಎಲ್ಲರಿಗೂ ಸಮಾಧಾನ ಹೇಳಿದ. ಒಳ್ಳೆಯದಾಗುತ್ತದೆಂದು ಜನಕ್ಕೆ ಹೇಳಿದ.

ಈಗಲೂ ಕೂಡ ವೆಳ್ಳಾಟಂಗಿರುವ (ಮುತ್ತಪ್ಪನ್ ತೆಯ್ಯಂಗಿರುವ ಮತ್ತೊಂದು ಹೆಸರು) ಚಿಲ್ಲರೆ ಕಾಸು ಕೊಟ್ಟು, ಅಲಸಂಡೆಕಾಳು, ತೆಂಗಿನಕಾಯಿ ಚೂರು, ಚಹವನ್ನು ಸೇವಿಸಿ, ಒಣಮೀನು ಕಚ್ಚಿ ಊಟ ಮಾಡಿ, ಊರಿನವರು ತಮ್ಮ ತಮ್ಮ ಕಷ್ಟವನ್ನು ನದಿಯಲ್ಲಿ ಹರಿಯಬಿಟ್ಟು ನೆಮ್ಮದಿಯಾಗಿ ಹಿಂತಿರುಗುತ್ತಾರೆ. ಪರಶ್ಶಿನಿ ಕಡವಿಗೆ ಹತ್ತಿರದ ರೈಲ್ವೆ ನಿಲ್ದಾಣವೆಂದರೆ ವಳಪಟ್ಟಣಂ. ಪರಶ್ಶಿನ ಕಡವಿನಿಂದ ರೈಲ್ವೇ ನಿಲ್ದಾಣದವರೆಗೆ ನದಿಯಲ್ಲಿ ಮೋಟಾರು ಬೋಟಿನಲ್ಲಿ ಪ್ರಯಾಣಿಸಬಹುದು. ಅಲ್ಲಿಂದ ಬಸ್ಸಿನಲ್ಲೂ ಕಣ್ಣೂರಿಗೆ ತಲುಪಬಹುದು.

ಮುತ್ತಪ್ಪನಿಗೆ ಪೂಜೆ ಮಾಡುವುದಕ್ಕೆ ಪೈಂಕುತ್ತಿ ಇಡುವುದು ಎನ್ನುತ್ತಾರೆ. ಹೆಸರುಕಾಳು ನೆನೆಹಾಕಿದ್ದೋ, ಕಡಲೆಕಾಳು ನೆನೆಹಾಕಿದ್ದು ಎಲೆಯಲ್ಲಿ ಬಡಿಸಲಾಗುತ್ತದೆ. ಅದರ ಮೇಲೆ ಕಿರುಗತ್ತಿಯಿಂದ ಕಾಯಿಚೂರನ್ನು ಸೀಳಿ ಹಾಕಲಾಗುತ್ತದೆ. ಅದಕ್ಕೆ ಮೇಲೆ ಸುಟ್ಟ ಒಣ ಮುಳ್ಳು ಮೀನನ್ನು ಜೊತೆಗೆ ಒಂದು ಬಾಟಲಿ ಸೇಂದಿ ಮುಂದಿಟ್ಟರೆ ಮುತ್ತಪ್ಪನ್ ಸಂತೃಪ್ತ. ನೈವೇದ್ಯ ಸೇವಿಸುವವರಿಗೂ ಖುಷಿಯೋ ಖುಷಿ. ಅಪ್ಪ ಪೈಂಕುತ್ತಿ ಇಡಲು ಕಲಿತಿದ್ದು ಪುರಳಿಮಲ ತಪ್ಪಲಿಗೆ ಕೆಲಸಕ್ಕೆ ಹೋದಾಗ. ಮಲೆಯ ಮೇಲೆ ತುಂಬಾ ಕತ್ತಲೆ, ಕಾಡುಹಲಸು, ಸಾಗುವಾನಿ, ಬೀಟೆ ಮರಗಳಿದ್ದವು. ಮಲೆಯಲ್ಲಿ ಕತ್ತರಿಸಿ ಕೆತ್ತಿ ಸಪಾಟು ಮಾಡಿದ ಮರವನ್ನು ಆನೆಯಿಂದ ಎಳೆಸಿ ತಂದು ಕೆಳಗೆ ಹಾಕಿಸುತ್ತಿದ್ದರು. ಮಲೆಯ ಕೆಳಗೆ ತಡೆ ಮಾಡಿ ಅಪ್ಪ ಮತ್ತು ಅವರ ಸಹಾಯಕ ಅದನ್ನು ಗರಗಸದಿಂದ ಸೀಳುತ್ತಾರೆ. ನಾಲ್ಕು ಸಲ ಕೆಳಕ್ಕೆ ತಳ್ಳಿ ಮೇಲೆತ್ತಿ ಎಳೆಯುತ್ತಾರೆ. ಐದನೆಯ ಸಲ ಬಲವಾಗಿ ಹಿಂದಕ್ಕೆ ಎಳೆಯುತ್ತಾರೆ. ಗರಗಸ ಒಂದಿಂಚು ಮುಂದಕ್ಕೆ ಸರಿಯುತ್ತದೆ.

ಅಪ್ಪನ ಬದುಕಿನ ತಾಳವು ಅದೇ ಆಗಿತ್ತು. ಏನಾದರೂ ತಪ್ಪಿಗೆ ಅಪ್ಪ ನನಗೆ ನಾಲ್ಕು ಏಟುಗಳನ್ನು ಕೊಡುತ್ತಿದ್ದರು. ಆದರೆ ಆ ಏಟುಗಳು ಅಷ್ಟೊಂದು ನೋಯಿಸುತ್ತಿರಲಿಲ್ಲ. ಐದನೆಯ ಏಟು ಮಾತ್ರ ಬಲವಾಗಿರುತ್ತಿತ್ತು.

ಮರ ಸೀಳಲು ಪುರಳಿ ಮಲೆಯ ಕೆಳಕ್ಕೆ ಹೋದಾಗಲೇ ಅಪ್ಪ ಅಮ್ಮನನ್ನು ಭೇಟಿಯಾಗಿದ್ದಂತೆ. ಅಮ್ಮನದು ಹೆಸರಾಂತ ಮನೆತನ. ಗೇಣಿದಾರರು, ವ್ಯಾಪಾರಸ್ಥರು, ಮಿಲಿಟರಿಯವರು... ಹೀಗೆ ಹಲವಾರು ಸ್ತರಗಳಲ್ಲಿರುವವರ ದೊಡ್ಡ ಮನೆ! ಪೊಲೀಸಿನವರು, ವ್ಯಾಪಾರಸ್ಥರು, ಶಾಲಾ ಮೇಷ್ಟ್ರುಗಳು, ಅಧಿಕಾರಿಗಳು ಹೆಣ್ಣು ಕೇಳಲು ಹಿಂಜರಿಯುತ್ತಿದ್ದ ತರವಾಡಿಗೆ ಮರಸೀಳುವ ನಾರಾಯಣ ನಾರಾಯಣಿಯನ್ನು ಕೇಳಲು ಹೋಗುತ್ತಾನೆ. ಜೊತೆಗೆ ಯಾರೂ ಇಲ್ಲ. ಒಂಟಿಯಾಗಿ ಹೊಸ್ತಿಲ ಬಳಿ ಅಡಗಿ ಕುಳಿತು ಪನ್ನಿಕ್ಕೋಡನ್ ಅಂಬು ಉತ್ತೇಜನ ನೀಡುತ್ತಾ ಹೇಳಿದ. 'ನೀನು ಅವಳ ಕೈ ಹಿಡಿದು ಕರ್ಕೋಂಡು ಊರಿಗೆ ನಡಿ ನಾರಾಯಣಾ...'

ತೀಯಾದ ಜಾತಿಯಲ್ಲಿ ಮನೆಯ ಕದಮುಚ್ಚಿ ತರ್ಪಣ ಬಿಡುವ ಪದ್ಧತಿಯೇನೂ ಇಲ್ಲವಲ್ಲ. ಆದರೆ ಗೌರವಸ್ಥನಾದ ಮಾವ ನಾಲ್ಕು ತಂಗಿಯರ ಪೈಕಿ ಜೀವಂತವಾಗಿದ್ದ ಒಬ್ಬಳೇ ಒಬ್ಬ ತಂಗಿಯನ್ನು ಸಂಪೂರ್ಣವಾಗಿ ಕಡೆಗಣಿಸಿದರು. ಅಮ್ಮನ ತರವಾಡಿನ, ಮಾವನ ಬಗ್ಗೆಯೆಲ್ಲಾ ಹೆಚ್ಚಿಗೆ ಅರಿಯುವುದೇ ಅಮ್ಮನ ಕತೆಗಳಿಂದ.

ಬೇಕಷ್ಟು ವ್ಯವಸಾಯ, ರಾಸುಗಳಿರುವ ಮನೆಯಾಗಿತ್ತು ಅದು. ಮೆಣಸೇ ಪ್ರಮುಖ ಬೆಳೆ. ಅದೊಂದು ವರ್ಷ ಮೆಣಸಿನ ಬೆಲೆ ಏರಿತು. ಖಂಡಿಗೆ ನಾಲ್ಕು ಸಾವಿರ ರೂಪಾಯಿಗಳು. ಬೆಳೆಯೂ ಸಮೃದ್ಧವಾಗಿತ್ತು. ನಾಲ್ಕು ಸಾವಿರದ ಕಾಲ ಎಂದು ಚರಿತ್ರೆಯಲ್ಲಿ ಅದು ಅರಿಯಲ್ಪಟ್ಟಿತು. ಸಾಸಿವೆ ಸುತ್ತಲು ಕಾಗದ ಹುಡುಕುವ ವ್ಯಾಪಾರಿಯೊಂದಿಗೆ ನೂರಿನ ನೋಟನ್ನು ಪೊಟ್ಟಣ ಮಾಡಿ 'ಇದರಲ್ಲಿ ಹಾಕು' ಎಂದು ಹೇಳಿದ ಕತೆ ಪ್ರಚಾರದಲ್ಲಿತ್ತು.

ಮಾವನಿಗೂ ಬೇಕಷ್ಟು ಮೆಣಸು ದೊರೆಯಿತು. ಗಂಟುಕಟ್ಟಿ ತಲೆಯ ಮೇಲೆ ಹೊತ್ತು ತಲಚ್ಚೇರಿಗೆ ತೆಗೆದುಕೊಂಡು ಹೋಗಿ ಮಾರಿದರು. ಮಡಿಲು ತುಂಬಾ ಹಣ ಸಿಕ್ಕಿತು. ತಿಂದು ಕುಡಿದು ನಡೆದಾಡಿದರು. ಸಂಜೆಯಾಗುತ್ತಿದ್ದಂತೆ ಮನೆಯ ನೆನಪಾಯಿತು. ಚಾವಶ್ಶೇರಿಗಿರುವ ಎಂ.ಆರ್.ಎಸ್. ಬಸ್ಸು ಕೂಡಾ ಹೋಗಿಬಿಟ್ಟಿತು.

ಅದು ತುಚ್ಚೇರಿಯಲ್ಲಿ ಮಾತ್ರ ಮೋಟಾರ್ ಕಾರುಗಳಿದ್ದವು. ಮಡಿಲಲ್ಲಿ ಯಥೇಚ್ಛ ಹಣವಿತ್ತು. ಕಾರು ಹಿಡಿದೇ ಊರಿಗೆ ಹೋಗೋಣವೆನಿಸಿತು. ಒಬ್ಬ ಕಾರಿನವನಿಗೆ ಹೇಳಿದ 'ನನ್ನನ್ನು ಊರು ತಲುಪಿಸ್ತೀಯಾ?'

ಊರಿನ ಹೆಸರು ಕೇಳಿದ ಕೂಡಲೇ ಬರೋದಿಲ್ಲ ವೆಂದ. ಎರಡನೆಯವನು ಮೂರನೆಯವನು ಅದನ್ನೇ ಹೇಳಿದ. ನಾಲ್ಕನೆಯವನು ಎಗರಿ ಬೀಳುವವನಂತೆ ಹೇಳಿದ, 'ಮೂಡಲದಿಂದ ಹಾಳಾದ ಇಂತಹ ಮಂದಿ ಬರ್ತಾರೆ... ನಾಲ್ಕು ಸಾವಿರದ ಗತ್ತೇನು ನನ್ನತ್ರ ನಡೆಯೋಲ್ಲ.'

ಮಾವ ಹಠಕ್ಕೆ ಬಿದ್ದರು. ಪಡವಲದವರಿಗೆ ಮೂಡಲದವರನ್ನ ಕಂಡರೆ ನಿರ್ಲಕ್ಷ್ಯ. ನಗರವಾಸಿಗಳೂ, ನಾಗರಿಕರೂ ಆದ ಪಡುವಲ ದವರು ಮೂಡಣದ ಹೆಣ್ಣುಮಕ್ಕಳನ್ನು ಮದುವೆಯಾಗಲೊಲ್ಲರು. ಮೂಡಲದವರಿಗೆ ಪಡವಲದವರನ್ನು ಕಂಡರೂ ಅಷ್ಟೇ ತುಚ್ಛ ಭಾವ. ಅಪಹಾಸ್ಯ ಮಾಡುತ್ತಿರುತ್ತಾರೆ. ಪಡವಲದ ಹೆಣ್ಣು ಮಗಳನ್ನು ಮದುವೆಯಾಗಿ ಕರೆದುಕೊಂಡು ಬಂದವರನ್ನು ಗೇಲಿ ಮಾಡುವುದುಂಟು.

'ಮೂಡಲದವರು' ಎಂಬ ಅಪಹಾಸ್ಯ ಮಾವನಿಗೆ ಕೊಂಚವೂ ಇಷ್ಟವಾಗಲಿಲ್ಲ.

ಮಾವ ಹೇಳಿದರು. 'ಮಾರ್ತಿಯೇನೋ ನಿನ್ನ ಕಾರನ್ನ?'

'ಹೌದು ಮಾರ್ತೀನಿ, ತೆಗೊಳ್ತೀರಾ?'

'ಬೆಲೆ ಹೇಳು.'

ಬೆಲೆ ಹೇಳಿದ. ಚಲಾವಣೆಯಲ್ಲಿರುವ ಬೆಲೆಗಿಂತ ಎರಡು ಪಟ್ಟು ಹೇಳಿದ. ಒಂದು ಆಣೆ ಕಡಿಮೆಯಾಗದಂತೆ ಎಲ್ಲವನ್ನು ಎಣಿಸಿಕೊಟ್ಟರು ಮಾವ. ಅದರ ನಂತರ ಅದೊಂದು ಗೊಂದಲದ ಗೂಡಾಯಿತು. ಕಾರಿಗೆ ಒಬ್ಬ ಡ್ರೈವರ್ ಬೇಕು. ಟ್ಯಾಕ್ಸಿಯವರೆಲ್ಲಾ ಸೇರಿ ಸಮಾಲೋಚನೆ ಮಾಡಿ ಕೆಲಸವಿಲ್ಲದವನೊಬ್ಬನನ್ನು ಡ್ರೈವರನ್ನಾಗಿ ಮಾಡಿದರು.

ದಾರಿಯಲ್ಲಿ ಮೂರು ಕಡೆ ಗಾಡಿ ನಿಂತಿತು. ಡ್ರೈವರ್ ಗಾಡಿಯಲ್ಲೇ ಕುಳಿತಿದ್ದ. ಮಾಲೀಕ ಕಾರನ್ನು ತಳ್ಳಿದ. ಇಳಿಜಾರು ಬರುವವರೆಗೂ ತಳ್ಳಬೇಕು. ಸ್ಟಾರ್ಟ್ ಮಾಡಲಿರುವ ಬಾಗಿದ ಕಬ್ಬಿಣದ ಸಲಾಕೆಯನ್ನು ಮುಂದಿನ ನಂಬರ್ ಪ್ಲೇಟಿನ ಬಳಿಯಿರುವ ದ್ವಾರದಲ್ಲಿ ತೂರಿಸಿ ತಿರುಗಿಸಬೇಕು. ಆದರೂ ಆ ಗಾಡಿಗೆ ಯಾವ ಕಂಪನವೂ ಇಲ್ಲ.

ಒಂದರೆಡು ದಿನಗಳು ಊರೆಲ್ಲಾ ಕಾರಿನಲ್ಲಿ ಸುತ್ತಾಡಿದರು ಮಾವ. ಮೂರನೆಯ ದಿನ ಕಾರು ನಿಂತಲ್ಲೇ ಮುಷ್ಕರ ಹೂಡಿತು. ತಲಚ್ಚೇರಿಯಿಂದ ಜೀಪು ಬಂದು ಹಗ್ಗ ಕಟ್ಟಿ ಎಳೆದುಕೊಂಡು ಹೋಗಲಾಯಿತು. ಕಾರಿನ ಹಿಂದೆ ಹುಡುಗರು ಕೇಕೆ ಹಾಕುತ್ತಾ ಓಡಿದರು. ಕೊನೆಗೆ ಮಾವ ನಾಲ್ಕು ಸಾವಿರ ಕಾಲದ ಸಂಪಾದನೆ ಹಾಗೂ ಹೊಲ ಮಾರಿದ ಹಣವನ್ನೆಲ್ಲಾ ಕಳೆದುಕೊಂಡರು. ಅನಂತರ ಗಾಡಿಯನ್ನು ಅದರ ಕಬ್ಬಿಣದ ಬೆಲೆಗೆ ಗುಜರಿಗೆ ಮಾರಿದ್ದರಂತೆ. ಮಾವನ ಜೊತೆಗೆ ಒಂದಷ್ಟು ಸ್ನೇಹಿತರೂ ಇದ್ದರಂತೆ.

ಮಾವ ಗುಂಡು ಹೊಡೆಯುವುದರಲ್ಲಿ ನಿಪುಣರಾಗಿದ್ದರು. ತೋಟಾ ತುಂಬಿ ಗುಂಡು ಹೊಡೆಯುವ ಕೋವಿಯಾಗಿತ್ತು ಅವರದ್ದು. ಅಂಗಳದ ಆರಾಮ ಕುರ್ಚಿಯಲ್ಲಿ ಕುಳಿತು ಕೋವಿಯನ್ನು ಒರೆಸಿ ಸ್ವಚ್ಛಗೊಳಿಸುವುದು ಮಾವನ ಅತ್ಯಂತ ದೊಡ್ಡ ಮೋಜಾಗಿತ್ತು.

ಪುರಳಿಮಲೆಯಿಂದ ಜಿಂಕೆ, ಕರಿಕೋತಿ, ಮೊಲ, ಕಾಡುಹಂದಿಗಳನ್ನೆಲ್ಲಾ ಗುಂಡು ಹೊಡೆದು ತರುತ್ತಿದ್ದರು. ಜೊತೆಗೆ ಎರಡು ಮೂರು ಹಿಂಬಾಲಕರೂ ಇರುತ್ತಿದ್ದರು. ಕೋವಿಯನ್ನು ಹೆಗಲ ಮೇಲೇರಿಸಿ ಮಾವ ಮುಂದೆ ನಡೆಯುತ್ತಾರೆ. ಗುಂಡೇಟು ತಿಂದ ಪ್ರಾಣಿಗಳನ್ನು ದೊಡ್ಡದೊಂದು ಕಂಬಿಗೆ ಕಟ್ಟಿ ತೋಳ ಮೇಲೆ ಹೊತ್ತು ಹಿಂಬಾಲಕರು ಹಿಂದಿನಿಂದ ಬರುತ್ತಾರೆ. ಹೆಂಗಸರು ಮಕ್ಕಳು ಅದನ್ನು ನೋಡಲು ಮನೆಯಿಂದ ಹೊರಬಂದು ನಿಂತಿರುತ್ತಾರೆ. ಅಧಿಕಾರಿಗಳಿಗೂ, ಮೇನೋನರಿಗೂ ಹಾಗೂ ಊರಿನ ಉಳಿದ ಶ್ರೀಮಂತ ಹಿರಿಯರಿಗೆ ಬೇಟೆಯಾಡಿ ತಂದ ಮಾಂಸವನ್ನು ಕಾಣಿಕೆ